ಅಧ್ಯಕ್ಷರು:- ಇದ್ದಾರೆ. ಕರೆಯಿಸಿ ಎಂದು ಹೇಳಿ. ಕಳುಹಿಸಿದ್ದೇನೆ. ಸ್ವಲ್ಪ ಕಾಲಾವಕಾಶ ಕೊಡಿ; ಅಷ್ಟರೊಳಗೆ ಈ ಗಮನ ಸೆಳೆಯುವ ಸೂಚನೆ ಮುಗಿಸಿಬಿಡೋಣ. Calling Attention on matters of urgent public importance.

Subash Joshi :- Reg stoppage of development Work by Minor Irrigation Division in Belgaum Dt. I call the attention of the Hon'ble Minister of States for Minior Irrigation regarding the stoppage of all the developmental works due to non spending of allotment by the Minor Irrigation Division, Belgaum District..

ಡಾ॥ ಆರ್. ಬಿ. ಚೌಧರಿ:- ಮಾನ್ಯ ಅಧ್ಯಕ್ಷರೇ, 1992-93ನೇ ಸಾಲಿನಲ್ಲಿ ಬೆಳಗಾಂ ಸಣ್ಣ ನೀರಾವರಿ ವಿಭಾಗದ ವ್ಯಾಪ್ತಿಯಲ್ಲಿ 13 ಮುಂದುವರಿದ ಕಾಮಗಾರಿಗಳು ಇದ್ದು ಅವುಗಳಿಗೆ 16 ಲಕ್ಷ ರೂಪಾಯಿಗಳ ಅನುದಾನವನ್ನು ಒದಗಿಸಲಾಗಿದೆ. ಇದರಲ್ಲಿ 11.78 ಲಕ್ಷ ರೂಪಾಯಿಗಳನ್ನು 1993 ರ ಫೆಬ್ರವರಿ ಅಂತ್ಯಕ್ಕೆ ಖರ್ಚು ಮಾಡಲಾಗಿದೆ. ಇದರೊಂದಿಗೆ 1992-93ನೇ ಸಾಲಿನಲ್ಲಿ 27 ಹೊಸ ಕಾಮಗಾರಿಗಳು ಸೇರಿದ್ದು 251 ಲಕ್ಷ ರೂಪಾಯಿಗಳ ಅನುದಾನವನ್ನು ಒದಗಿಸಲಾಗಿದೆ. ಇದರಲ್ಲಿ 11 ಕಾಮಗಾರಿಗಳಿಗೆ ಮಂಜುರಾತಿ ದೊರೆತಿದೆ. ಮತ್ತು 1993ರ ಫೆಬ್ರವರಿ ಅಂತ್ಯಕ್ಕೆ 11.15ಲಕ್ಷ ರೂಪಾಯಿಗಳನ್ನು ಖರ್ಚು ಮಾಡಲಾಗಿದೆ. ಈ ಪೈಕಿ ಐದು ಕಾಮಗಾರಿಗಳು ಮಾರ್ಚ್ 1993ರಲ್ಲಿ ಮಂಜೂರಾಗಿದ್ದು ಈ ಕೆಲಸಗಳನ್ನು ತ್ವರಿತ ಗತಿಯಲ್ಲಿ ತೆಗೆದುಕೊಳ್ಳಲು ಕ್ರಮ ಕೈಗೊಳ್ಳಲಾಗುವುದು. ಉಳಿದ 16 ಕಾಮಗಾರಿಗಳಿಗೆ ಅಂದಾಜನ್ನು ಸಿದ್ಧಪಡಿಸಲಾಗಿದ್ದು ವಿವಿಧ ಮಟ್ಟದಲ್ಲಿ ಪರಿಶೀಲನೆಯಲ್ಲಿ ಇದೆ. ಇವುಗಳಿಗೆ ಮಂಜೂರಾತಿ ದೊರೆತ ನಂತರ ಕೆಲಸಗಳನ್ನು ಪ್ರಾರಂಭಿಸಲಾಗುವುದು.

Sri Subash Joshi :- Around 3-4 crore rupees are sanctioned in Belgaum Division. Out of that, in Chikodi division, not a single work is started. I can quote the example of M.I. Tank, Pattanakudi,. It is a budgeted work. Raising the height or Karatgar Barrage... Kadkol Barrage; In Hukkeri Taluq Kamatnoor; Rashing, Ankalgi,

ಅದು ಒಂದೇ ಒಂದು ಕೆಲಸ ಪ್ರಾರಂಭ ಆಗಿಲ್ಲ. MI division, Chikodi and MI Division. Belgaum, are not at all interested to start the work. We have raised these points in the KDF Meeting with the concened. They only say that the technical sanction is not there and it has to go to the Chief Engineer.

ಚೀಫ್ ಇಂಜಿನಿಯರ್‌ನಿಂದ ಜಿಲ್ಲಾಪರಿಷತ್‌ಗೆ ಬರಬೇಕು. ಅದರ ಸಲುವಾಗಿ ಬಹಳ ತಡ ಆಗುತ್ತಿದೆ. ಎಲ್ಲೂ ಒಂದೇ ಒಂದು ಕೆಲಸ ಪ್ರಾರಂಭ ಆಗಿಲ್ಲ.

ಡಾ॥ ಆರ್.ಬಿ. ಚೌಧರಿ:- ಮಾನ್ಯ ಅಧ್ಯಕ್ಷರೇ ಚಿಕ್ಕೋಡಿ ತಾಲ್ಲೂಕಿನಲ್ಲಿ ಏನು ಇದೆ, ಕೆಲವೊಂದು ಕಾಮಗಾರಿಗಳನ್ನು, ಚಿಕ್ಕೋಡಿ ಡಿವಿಜನ್‌ಗಳಲ್ಲಿ ಕೈಗಳಲ್ಲಿ ಎತ್ತಿಕೊಳ್ಳಬೇಕೆಂಬ ಇರಾದೆ ಇತ್ತು. ವಿವಿಧ ಹಂತಗಳಲ್ಲಿ ಈ ಕಾಮಗಾರಿಗಳು ಇವೆ. ಕೆಲವೊಂದು ಆಡ್ಮಿನಿಸ್ಟ್ರೇಟೀವ್ ಹಂತದಲ್ಲಿವೆ. ಕೆಲವೊಂದು ಟೆಕ್ನಿಕಲ್ ಹಂತದಲ್ಲಿ ಸ್ಯಾಂಕ್ಷನ್ ಆಗಿಲ್ಲ. ಅದರ ಸಲುವಾಗಿ ತೆಗೆದುಕೊಳ್ಳುವುದಕ್ಕೆ ತಡ ಆಗಿದೆ. ಇವುಗಳನ್ನು ಕೂಡಲೇ ತೆಗೆದುಕೊಳ್ಳಲು ನಾವು ಕ್ರಮ ತೆಗೆದುಕೊಳ್ಳುತ್ತೇವೆ.

Sri Subash G. Joshi :- For the last three years it is pending for technical sanction.

Dr. R.B. Choudhari :- That is true. Now we are taking up shortly.

ಶ್ರೀ ಸುಭಾಷ್ ಎಸ್. ಜೋಷಿ:- ಒಂದೇ ಒಂದು ಕೆಲಸ ಹೇಳಿ. ಸ್ಕೇರ್ಸಿಟಿ ಇದೆ. ಮುಂದಿನ ತಿಂಗಳು. ಕೆಲಸವು ಪ್ರಾರಂಭ ಮಾಡುತ್ತೀರಾ?

ಡಾ ॥ ಆರ್.ಬಿ. ಚೌಧರಿ:- ಆದಷ್ಟು ಶೀಘ್ರವಾಗಿ ಮಾಡುತ್ತೇವೆ.

ಶ್ರೀ ಸುಭಾಷ್ ಎಸ್ ಜೋಷಿ :- ಶೀಘ್ರ ಬೇಡ, ಮುಂದಿನ ತಿಂಗಳು ಮಾಡಿ.

ಡಾ. ಆರ್.ಬಿ. ಚೌಧರಿ :- ಮುಂದಿನ ತಿಂಗಳು ಎಂದರೆ ಹೇಗೆ? ಎಷ್ಟು ಸಾಧ್ಯವೋ ಅಷ್ಟು ಶೀಘ್ರವಾಗಿ ಮಾಡುತ್ತೇವೆ. ಏಕೆಂದರೆ ಅವು ವಿವಿಧ ಹಂತಗಳಲ್ಲಿವೆ. ಅಡ್ಮಿನಿಸ್ಟ್ರೇಟೀವ್ ಸ್ಯಾಂಕ್ಷನ್ ಆಗಿಲ್ಲ, ಟೆಕ್ನಿಕಲ್ ಸ್ಯಾಂಕ್ಷನ್ ಆಗಿಲ್ಲ.

ಶ್ರೀ ಸುಭಾಷ್ ಎಸ್. ಜೋಷಿ :- ಒಂದೇ ಒಂದು ಕೆಲಸ ಮುಂದಿನ ತಿಂಗಳು ಪ್ರಾರಂಭ ಮಾಡುತ್ತೀರಾ? ಯಾವುದಾದರೂ ಕೆಲಸ, ಅದನ್ನು ಹೇಳಿ.

ಡಾ. ಆರ್.ಬಿ. ಚೌಧರಿ :- ಆದಷ್ಟು ಶೀಘ್ರ ಮಾಡುತ್ತೇವೆ.

ಶ್ರೀ ಸುಭಾಷ್ ಎಸ್. ಜೋಷಿ :- ಶೀಘ್ರ ಬೇಡ, ಶೀಘ್ರ ಎಂದು ಮೂರು ವರ್ಷ ಆಯಿತು.

ಶ್ರೀ ಹೆಚ್. ವಿಶ್ವನಾಥಯ್ಯ :- ಈಗ ಶೀಘ್ರ ಎಂದರೆ ಮೂರು ವರ್ಷ ಮೂರು ತಿಂಗಳಲ್ಲಿ ಮಾಡುತ್ತೇವೆಂದು ಹೇಳಿ.

ಡಾ. ಆರ್‌ಬಿ. ಚೌಧರಿ :- ಅತಿ ಶೀಘ್ರದಲ್ಲಿ ಮಾಡುತ್ತೇವೆ.

ಶ್ರೀ ಶಿವಾನಂದ ಎಚ್. ಕೌಜಲಗಿ :- ಸನ್ಮಾನ್ಯ ಅಧ್ಯಕ್ಷರೆ, 1992-93ನೇ ಸಾಲಿನಲ್ಲಿ ನಮ್ಮ ಬೆಳಗಾಂ ಡಿವಿಜನ್‌ನಲ್ಲಿ 251 ಲಕ್ಷ ರೂಪಾಯಿಗಳನ್ನು ಆಯವ್ಯಯ ಪಟ್ಟಿಯಲ್ಲಿ ಒದಗಿಸಲಾಗಿತ್ತು. ಆಯವ್ಯಯ ಪಟ್ಟಿಯಲ್ಲಿ 251 ಲಕ್ಷ ರೂಪಾಯಿಗಳನ್ನು ಒದಗಿಸಿದರೂ ಸಹಿತ ತಾವು ಫೆಬ್ರುವರಿ ಅಂತ್ಯದವರೆಗೆ ಇಲ್ಲಿ ತಾವು ಖರ್ಚು ಮಾಡಿದ್ದು 11 ಲಕ್ಷದ 15 ಸಾವಿರ ರೂಪಾಯಿ. ಇದು ಸರ್ಕಾರಕ್ಕೆ ಶೋಭೆ ತರುತ್ತದೆಯೇ ಎಂದು ನಾನು ಕೇಳುತ್ತಿದ್ದೇನೆ. ಏಕೆಂದರೆ, ತಾವು ನೋಡುತ್ತಿದ್ದೀರಿ, ಸಣ್ಣ ನೀರಾವರಿ ಒಳ್ಳೆಯ ಯೋಜನೆಯಾಗಿದ್ದು, ಇದನ್ನು ಬಾಂಬೆ ಕರ್ನಾಟಕ ಪ್ರದೇಶದಲ್ಲಿ ತೆಗೆದುಕೊಳ್ಳಿ ಎಂದರೆ ಯಾರೂ ಕೂಡ ಕೇಳುವುದಕ್ಕೆ ತಯಾರಿಲ್ಲ. ಆದರೆ, ಎಲ್.ಓ.ಸಿ. ಯನ್ನು ಬಿಡುಗಡೆ ಮಾಡಿದ ಉದ್ದೇಶದಿಂದ 251 ಕೋಟಿ ರೂಪಾಯಿಗಳನ್ನು ಆಯವ್ಯಯ ಪಟ್ಟಿಯಲ್ಲಿ ಸೇರಿಸಿದ್ದರೂ ಸಹ ಇವೊತ್ತಿನವರೆವಿಗೆ ಕೇವಲ 11 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಲಾಗಿದೆ. ಅದರಲ್ಲೂ ಹಂತ ಹಂತವಾಗಿ ಖರ್ಚು ಮಾಡಲಾಗಿದೆ. ಇದು ಸರಿಯೇ? ಆಯವ್ಯಯ ಪಟ್ಟಿಯಲ್ಲಿ 251 ಲಕ್ಷ ರೂಪಾಯಿಗಳನ್ನು ತೋರಿಸಿದ್ದೀರಿ. ಈ ಹಣವನ್ನು ಮಾರ್ಚಿ ತಿಂಗಳ ಅಂತ್ಯದೊಳಗೆ ಖರ್ಚು ಮಾಡುತ್ತೀರಾ, ಹೇಗೆ ಎಂಬುದು ನನ್ನ ಎರಡನೆಯ ಪ್ರಶ್ನೆ. ಅನಂತರ, ಮೂರನೆಯದಾಗಿ ಅಂದಾಜು ಸಮಿತಿಯವರು ಸಣ್ಣ ನೀರಾವರಿ ಇಲಾಖೆ ಬಗ್ಗೆ ಹಿಂದೆ ಶಿಫಾರಸ್ಸು ಮಾಡಿದ್ದಾರೆ. ಶಿಫಾರಸ್ಸಿನಲ್ಲಿ ಮೂರು ತಿಂಗಳೊಳಗಾಗಿ ಕೆಲಸಪ್ರಾರಂಭ ಮಾಡಬೇಕೆಂದು ಹೇಳಲಾಗಿದೆ. ಅಲ್ಲದೆ, ಅಂದಾಜು ಸಮಿತಿಯ ವರದಿ ವಿಧಾನಸಭೆಯಲ್ಲಿ ಅಂಗೀಕಾರವಾಗಿದ್ದರೂ ಇವೊತ್ತಿನ ತನಕ ಸಣ್ಣ ನೀರಾವರಿ ಇಲಾಖಾಧಿಕಾರಿಗಳು ಈ ಬಗ್ಗೆ ಯಾವುದೇ ಕ್ರಮ ಕೈಗೊಳ್ಳುತ್ತಿಲ್ಲ. ಆದಕಾರಣ, ಅಂದಾಜು ಸಮಿತಿಯವರು ಶಿಫಾರಸ್ಸುಮಾಡಿದ ಕೆಲಸಗಳನ್ನು ತಾವು ಕೈಗೆತ್ತಿಕೊಳ್ಳುತ್ತೀರಾ? ಹೇಗೆ? ಉದಾಹರಣೆಗೆ, ಬೆಳಗಾಂ ಜಿಲ್ಲೆ ಬೈಲಹೊಂಗಲ ತಾಲ್ಲೂಕಿನ ವಕ್ಕುಂದ, ದೇವಲಾಪುರ, ಸಂಗೊಳ್ಳಿ ಮತ್ತು ದಕ್ಷಿಣ ತಾಲ್ಲೂಕಿನಲ್ಲಿರುವ ಮಾಟೋಳ್ಳಿ ಏಣಗಿ ಗ್ರಾಮಗಳಲ್ಲಿ augmentation of lift irrigation ಅಥವಾ ಲಿಫ್ಟ್ ಇರಿಗೇಷನ್ ತೆಗೆದುಕೊಳ್ಳಬೇಕೆಂದು ಶಿಫಾರಸ್ಸು ಮಾಡಿದ್ದಾರೆ. It is anunanimous report. ಸಮಿತಿಯ ವರದಿ ಇದ್ದು, ಅದರಲ್ಲಿ

ತಿಳಿಸಿರುವಂತೆ ಮೂರುತಿಂಗಳೊಳಗಾಗಿ ಕೆಲಸ ಪ್ರಾರಂಭಿಸಬೇಕು, ಮತ್ತು ಅದಕ್ಕೆ ಹಣ ಒದಗಿಸಬೇಕೆಂದು ಹೇಳಿದ್ದರೂ ಸಹ ಇವೊತ್ತಿನವರೆವಿಗೂ ಏಕೆ ಕೆಲಸ ಪ್ರಾರಂಭಿಸಿಲ್ಲ? ಎಷ್ಟು ದಿವಸದೊಳಗಾಗಿ ಕೆಲಸ ಪ್ರಾರಂಭಿಸುತ್ತೀರಿ ಎಂದು ಕೇಳುತ್ತಿದ್ದೇನೆ.

ಡಾ. ಆರ್.ಬಿ. ಚೌಧುರಿ (ಸಣ್ಣ ನೀರಾವರಿ ಸಚಿವರು) :- ಮಾನ್ಯ ಅಧ್ಯಕ್ಷರೇ ಮಾನ್ಯ ಸದಸ್ಯರು ಏನು ಹೇಳಿದ್ದಾರೆ, ಅದು ನಿಜವಿದೆ. ಈ ಪರಿಸ್ಥಿತಿ ಇರುವುದು ಬರಿ ಬೆಳಗಾಂ ಜಿಲ್ಲೆಯಲ್ಲಿ ಮಾತ್ರವಲ್ಲ, ಇನ್ನು ಕೆಲವು ಜಿಲ್ಲೆಗಳಲ್ಲಿದೆ. ಅಲ್ಲಿಯೂಬಹಳಷ್ಟುಕೆಲಸಮಾಡಿಲ್ಲ. ಅಲ್ಲದೆ, ಒದಗಿಸಿರುವ ಹಣವನ್ನು ಮಾರ್ಚಿ ಅಂತ್ಯದೊಳಗೆ ಖರ್ಚು ಮಾಡುತ್ತೀರಾ ಎಂದು ಮಾನ್ಯ ಸದಸ್ಯರು ಕೇಳಿದ್ದಾರೆ, ಇವೊತ್ತೇ ಮಾರ್ಚಿ ಅಂತ್ಯವಾಗಿದ್ದು, ಹಣವನ್ನು ಖರ್ಚು ಮಾಡುವುದಕ್ಕೆ ಹೇಗೆ ಸಾಧ್ಯ? ಅನಂತರ, ಅಂದಾಜು ಸಮಿತಿಯವರು ಏನು ಶಿಫಾರಸ್ಸುಗಳನ್ನು ಮಾಡಿದ್ದಾರೆ, ಅದರಪ್ರಕಾರ ನಾವು ಶೀಘ್ರವಾಗಿ ಏತ ನೀರಾವರಿ ಕಾಮಗಾರಿಗಳನ್ನು ತೆಗೆದುಕೊಳ್ಳುತ್ತೇವೆಂದು ನಾನು ಮಾನ್ಯ ಸದಸ್ಯರಿಗೆ ಭರವಸೆ ಕೊಡುತ್ತೇನೆ.

ಶ್ರೀ ಶಿವಾನಂದ ಎಚ್.ಕೌಜಲಗಿ :- ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಅಂದಾಜು ಸಮಿತಿಯ ವರದಿಗೆ ಮಾನ್ಯತೆ ಕೊಡುವುದಾಗಿ ಹೇಳಿದ್ದಾರೆ. ಅದಕ್ಕಾಗಿ ಅವರಿಗೆ ನನ್ನ ಧನ್ಯವಾದಗಳು. ಎರಡನೆಯದಾಗಿ, ಅಂದಾಜು ಸಮಿತಿಯವರು ಶಿಫಾರಸ್ಸಿನಲ್ಲಿ ಮೂರು ತಿಂಗಳೊಳಗಾಗಿ ಕೆಲಸ ಪ್ರಾರಂಭಿಸಬೇಕೆಂದು ಹೇಳಿದ್ದಾರೆ. ತಾವೂ ಸಹ ಆ ಸಮಿತಿಯಲ್ಲಿದ್ದೀರಿ, ಅಥವಾ ಹೊಸ ಏತ ನೀರಾವರಿ ಯೋಜನೆಯನ್ನು ಕೈಗೊಂಡು ಆ ಭಾಗಕ್ಕೆ ನೀರು ಕೊಡುವ ಸಲುವಾಗಿ ಮೂರು ತಿಂಗಳೊಳಗಾಗಿ ಕೈಗೊಳ್ಳಬೇಕೆಂದು ಮತ್ತು ಇದಕ್ಕೆ ಬೇಕಾಗುವ ಹಣವನ್ನು ಸಹ ಸರ್ಕಾರ ಕೂಡಲೇ ಬಿಡುಗಡೆ ಮಾಡಬೇಕೆಂದು ಸಮಿತಿಯು ಶಿಫಾರಸ್ಸು ಮಾಡುತ್ತದೆ. ವರದಿಯ ಶಿಪಾರಸ್ಸಿನಲ್ಲಿ ಸ್ಪಷ್ಟವಾಗಿ ಹೇಳಿದ್ದಾರೆ. ಈ ಹಿನ್ನೆಲೆಯಲ್ಲಿ ನೀರು ಕೊಡುವ ಉದ್ದೇಶದಿಂದ ಬೈಲಹೊಂಗಲತಾಲ್ಲೂಕಿನ ಪೈಕಿ ಮಕ್ಕುಂದ ದೇವಲಾಪುರ, ಸಂಗೊಳ್ಳಿ, ಅನಗೋಡ ಮತ್ತು ದಕ್ಷಿಣ ತಾಲ್ಲೂಕಿನ ಮಾಟೋಳ್ಳಿ, ಪಣಗಿ ಗ್ರಾಮಗಳಲ್ಲಿ augmentation of lift irrigation ಅಥವಾ ಲಿಫ್ಟ್ ಇರಿಗೇಷನ್ ತೆಗದುಕೊಳ್ಳಬೇಕೆಂದು ಶಿಫಾರಸ್ಸು ಮಾಡಲಾಗಿದೆ. ಶಿಪಾರಸ್ಸಿನ ಪ್ರಕಾರ ಎಷ್ಟು ದಿವಸದೊಳಗಾಗಿ ಅನುಷ್ಠಾನಗೊಳಿಸುತ್ತೀರಿ? ಸಮಿತಿಯು ತನ್ನ ವರದಿ ಸಲ್ಲಿಸಿ ಈಗಾಗಲೇ ಒಂದು ವರ್ಷವಾಯಿತು. ವರದಿ ಪ್ರಕಾರ ಮೂರು ತಿಂಗಳೊಳಗೆ ಕೆಲಸವನ್ನು ಕೈಗೊಂಡಿಲ್ಲ, ಮುಂದೆ ಎಷ್ಟುದಿವಸದೊಳಗಾಗಿ ಮಾಡುತ್ತೀರಿ? ಏಕೆಂದರೆ, ನಾವು ಕೇಳುತ್ತೇವೆ : ಸಣ್ಣ ನೀರಾವರಿಗೆ ಹೆಚ್ಚು ಕೊಟ್ಟಿದ್ದೇವೆ, ಇನ್ನು ಎಷ್ಟು ಬೇಕೆಂದು. ನನಗೆ ಮುಖ್ಯಮಂತ್ರಿಗಳು ಹೇಳಿದ್ದಾರೆ ಶಿವಣ್ಣ, ಮೈನರ್ ಇರಿಗೇಷನ್ ಸಲುವಾಗಿ ಎಷ್ಟು ಬೇಕೋ ಅಷ್ಟು ಪ್ರಪೋಸಲ್‌ಗಳನ್ನು ತೆಗೆದುಕೊಂಡು ಬಾ, ಅವೆಲ್ಲವನ್ನೂ ನಾನು ಅಕ್ಸೆಪ್ಟ್ ಮಾಡುತ್ತೇನೆ. there is no problem regarding minor irrigation ಎಂದು. ಇದುಬರೀ lip sympathy. ಎಂದು ಹೇಳುತ್ತಾರಲ್ಲಾ ಹಾಗೆ ಆಗುತ್ತದೆ. ಎಷ್ಟು ದಿವಸದೊಳಗೆ ಉಳಿದ ಕೆಲಸಗಳನ್ನು ತೆಗೆದುಕೊಳ್ಳುತ್ತೀರಿ? ನಾನು ನಿಮಗೆ ಇನ್ನೊಂದು ಮಾತನ್ನು ಹೇಳುತ್ತೇನೆ : ನಿಮಗೆ ಅಧಿಕಾರವಿರುವುದರಿಂದ ಒಳ್ಳೆಯ ಕೆಲಸಮಾಡಿ ತೋರಿಸಿಕೊಡಿ, ಡಾ. ಚೌಧುರಿಯವರು ಒಳ್ಳೆಯ ಕೆಲಸಗಾರರು. ಈ ಮೈನರ್ ಇರಿಗೇಷನ್ ಕೆಲಸ ಆಗುತ್ತದ ಎಂದು ಹೇಳಿದ್ದಾರೆ, ಅದನ್ನು ತೋರಿಸಿಕೊಡಿ. ಈ ಮೈನರ್ ಇರಿಗೇಷನ್ ಡಿಪಾರ್ಟ್‌ಮೆಂಟ್ ಮಲಗಿದಂತಿದೆ. ಸನ್ಮಾನ್ಯ ಅಧ್ಯಕ್ಷರೆ, ಇದಿಷ್ಟೇ ಅಲ್ಲ, ನಾವು ಒಂದು ಪ್ರಪೋಸಲ್ ಮಾಡಿದ್ದೇವೆ : ಏನೆಂದರೆ, ಶಿವನಸಮುದ್ರ ಪ್ರಾಜೆಕ್ಟ್‌ಗೆ 10 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದರೆ 150 ಎಕರೆಗಳಷ್ಟು ಪ್ರದೇಶಕ್ಕೆ ನೀರಾವರಿಯಾಗುತ್ತದೆಂದು ಹೇಳಿದ್ದೇವೆ. ಅದೇ ತರಹದ ಇನ್ನೊಂದು ಪ್ರಪೋಸಲ್ ಅನ್ನು ಎರಡು ತಿಂಗಳಹಿಂದೆ ಮಾಡಿದ್ದರೂ ಸಹ ಇವೊತ್ತಿನ ತನಕ ಅದನ್ನು ಮಂಜೂರು ಮಾಡುವುದಕ್ಕೆ ತಯಾರಿಲ್ಲ. ಕೊನೆಗೆ overall savings ಲಕ್ಷ ರೂಪಾಯಿಗಳಲ್ಲಿ ಕೇವಲ 11 ಲಕ್ಷ ರೂಪಾಯಿಗಳನ್ನು ಇಟ್ಟಿದ್ದಾರೆ. ರುದ್ರಾಪುರದಲ್ಲಿ ರಿಪೇರಿ ಮಾಡುವುದಕ್ಕೆ ಹೇಳಿದ್ದೆವು. ಆದರೂ ಸಹ ನಾನು ಒಂದು ಕೇಳುತ್ತೇನೆ. ಅಂದಾಜು

ಸಮಿತಿಯವರು ಶಿಫಾರಸ್ಸು ಮಾಡಿ ಮೂರು ತಿಂಗಳೊಳಗಾಗಿ ಕೆಲಸ ಪ್ರಾರಂಭಿಸಬೇಕೆಂದು ಹೇಳಿದ್ದರು, ನೀವು ಎಷ್ಟು ತಿಂಗಳೊಳಗಾಗಿ ಈ ಕೆಲಸ ಪ್ರಾರಂಭಿಸುತ್ತೀರಿ ಎಂಬುದನ್ನು ಹೇಳಿರಿ.

ಡಾ. ಆರ್.ಬಿ. ಚೌಧುರಿ :- ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ಕೌಜಲಗಿಯವರು ಏನು ಏತ ನೀರಾವರಿಯ ಬಗ್ಗೆ ಹೇಳಿದ್ದಾರೆ, ಅದರ ಬಗ್ಗೆ ಹೇಳುವುದಾದರೆ ಈ ಏತ ನೀರಾವರಿಯನ್ನು ಪ್ರಾರಂಭ ಮಾಡುವುದಕ್ಕೆ ಬಹಳಷ್ಟು ಆಡಚಣೆಗಳು ಇದೆ, ಅದು ಮಾನ್ಯ ಸದಸ್ಯರಿಗೂ ಗೊತ್ತು. ಆದರಿಂದಾಗಿ ಈ ಕೆಲಸ ತಡವಾಗಿದೆ. ಇದಲ್ಲದೆ ಇದರಬಗ್ಗೆ ಚರ್ಚೆ ಮಾಡುವುದಕ್ಕೆ ಬೆಳಗಾಂಗೆ ಬಂದು ಈಗಾಗಲೇ ತಮ್ಮೆಲ್ಲರ ಜೊತೆ ಚರ್ಚೆ ಮಾಡಿ ಇದರಲ್ಲಿ ಏನೇನು ಅಡಚಣೆ ಇದೆ ಅದನ್ನು ನಿವಾರಣೆ ಮಾಡುತ್ತೇವೆಂದು ಹೇಳಿದ್ದೇನೆ. ಮತ್ತು ಇದರ ಬಗ್ಗೆ ಅಂದಾಜು ಸಮಿತಿಯವರು ಮೂರು ತಿಂಗಳಿನಲ್ಲಿ ಮಾಡಬೇಕೆಂದು ಶಿಫಾರಸ್ಸು ಮಾಡಿದೆ. ಆ ಸಮಿತಿಯಲ್ಲಿ ನಾನೂ ಕೂಡ ಇದ್ದೆ, ಅದು ನನಗೆ ಚೆನ್ನಾಗಿ ಗೊತ್ತು. ಈಗ ಇದಕ್ಕೆ ಸಾಕಷ್ಟು ಸಮಯ ಹಾಳಾಗಿ ಹೋಗಿರುವುದರಿಂದ ಇನ್ನು ಏನು ಸಮಯ ಇದೆ ಅದನ್ನು ಹಾಳು ಮಾಡದೆ ಶೀಘ್ರವಾಗಿ ಇದರ ಕೆಲಸವನ್ನು ಕೈಗೊಳ್ಳುತ್ತೇವೆ ಎಂದು ಹೇಳುತ್ತೇನೆ. ಮತ್ತು ಅಥಣಿಯ ಬಗ್ಗೆ ತಮಗೆಲ್ಲರಿಗೂ ಗೊತ್ತಿದೆ, ಅದನ್ನೂ ಕೂಡ ತೆಗೆದುಕೊಳ್ಳುತ್ತೇನೆ ಎನ್ನತಕ್ಕ ಮಾತನ್ನು ಹೇಳುತ್ತೇನೆ.

ಶ್ರೀ ಶಿವಾನಂದ ಹೆಚ್. ಕೌಜಲಗಿ :- ಎಷ್ಟು ದಿನದಲ್ಲಿ ತೆಗದುಕೊಳ್ಳುತ್ತೀರಿ? ತಾವು ಇಷ್ಟು ದಿನದಲ್ಲಿ ತೆಗೆದುಕೊಳ್ಳುತ್ತೇವೆಂದು ಆಶ್ವಾಸನೆಯನ್ನು ಕೊಟ್ಟುಬಿಡಿ. Say within three months. Plan, estimate ಆಗಿದೆ. Administrative approval ಆಗಿದೆ. ಹಣಕಾಸಿನ ತೊಂದರೆ ಇಲ್ಲ, ಮಾನ್ಯ ಮುಖಿಮಂತ್ರಿಗಳು ನಿಮಗೆ ನೀರಾವರಿಯ ಕೆಲಸಕ್ಕೆ ಎಷ್ಟು ಬೇಕೋ ಅಷ್ಟು ಹಣವನ್ನು ತೆಗೆದುಕೊಳ್ಳಿ ಎಂದು ಹೇಳಿದ್ದಾರೆ. ಇಷ್ಟು ದಿನದಲ್ಲಿ ಪ್ರಾರಂಭ ಮಾಡುತ್ತೇವೆಂದು ಹೇಳಿಬಿಡಿ, ಆಕಸ್ಮಾತ್ ಅದು ಸಾಧ್ಯವಾಗಿದ್ದರೆ ನಾವೇನೂ ಮಾಡುವುದಿಲ್ಲ. 3-4 ತಿಂಗಳು ತಡವಾಗಬಹುದು.

ಡಾ. ಬಿ.ಆರ್. ಚೌಧುರಿ :- ಮಾನ್ಯ ಮುಖ್ಯಮಂತ್ರಿಗಳೂ ಸಹ ಹೇಳಿದ್ದಾರೆ, ನಾನೂ ಸಹ ಆದಷ್ಟು ಶೀಘ್ರವಾಗಿ ತೆಗದುಕೊಳ್ಳುತ್ತೇವೆಂದು ಹೇಳುತ್ತೇನೆ. ಹಿಂದೆ ಮೂರು ತಿಂಗಳಿನಲ್ಲಿ ತೆಗದುಕೊಳ್ಳುತ್ತೇವೆಂದು ಒಂದು ವರ್ಷಕ್ಕೆ ಹೋಯಿತು, ನಾವು ಇಷ್ಟು ಅವಧಿ ಎಂದು ಹೇಳಿದ ಮೇಲೆ ಸ್ವಲ್ಪ ಹೆಚ್ಚು ಕಮ್ಮಿಯಾಗುವ ಸಂಭವವಿರುತ್ತದೆ. ಅದರ ಸಲುವಾಗಿ ಇದನ್ನು ಶೀಘ್ರವಾಗಿ ತೆಗದುಕೊಳ್ಳುತ್ತೇವೆಂದು ಹೇಳುತ್ತೇನೆ.

ಅಧ್ಯಕ್ಷರು :- ಮಾನ್ಯ ಕೆ. ಲಕ್ಕಣ್ಣ ಮತ್ತು ಆರ್. ದಯಾನಂದರಾವ್ ರವರ ಗಮನ ಸೆಳೆಯುವ ಸೂಚನೆಯನ್ನು ತಡೆಹಿಡಿದಿದ್ದೇನೆ. ಈಗ ಕಂದಾಯ ಮಂತ್ರಿಗಳು ಆ ಮನೆಯಲ್ಲಿ ಇದ್ದಾರೆ, ಅವರು ಮುಂದೆ ತೆಗೆದುಕೊಳ್ಳೋಣವೆಂದು ತಿಳಿಸಿದ್ದಾರೆ. ಇದನ್ನು ನಾಳೆ ಅಥವಾ ನಾಡಿದ್ದು ತೆಗೆದುಕೊಳ್ಳೋಣ.

ಶ್ರೀ ಆರ್. ದಯಾನಂದರಾವ್ :- ಬೇರೆ ಮಂತ್ರಿಗಳು ಇದ್ದಾರೆ, ನಾವು ಹೇಳುವುದನ್ನು ಅವರು ಬರೆದುಕೊಳ್ಳುತ್ತಾರೆ ಕಂದಾಯ ಮಂತ್ರಿಗಳು ಬಂದ ನಂತರದ ಉತ್ತರಕೊಡಬಹುದಲ್ಲ!

ಅಧ್ಯಕ್ಷರು :- ಅವರು ಉತ್ತರ ಹೇಳಬೇಕಲ್ಲ!

ಶ್ರೀ ಬ್ಲೇಸಿಯನ್ ಎಂ. ಡಿಸೋಜ :- ಕಂದಾಯ ಮಂತ್ರಿಗಳು ಇನ್ನೇನು ಬರುತ್ತಾರೆ.

ಅಧ್ಯಕ್ಷರು :- ಮಾನ್ಯ ವೈ.ಕೆ. ರಾಮಯ್ಯನವರು, ಏಕಾಂತಯ್ಯನವರು ಮತ್ತು ನಂಜುಂಡಸ್ವಾಮಿಯವರು ಕಳುಹಿಸಿರತಕ್ಕ ಗಮನ ಸೆಳೆಯುವ ಸೂಚನೆಯ ಬಗ್ಗೆ ಉತ್ತರಕೊಡಲು ಮಂತ್ರಿಗಳು ಇಲ್ಲ.

2. ಗ್ರಾಮಾಂತರ ಪ್ರದೇಶಗಳ ಅಭ್ಯರ್ಥಿಗಳಿಗೆ ನೀಡುತ್ತಿದ್ದ ಶೇ. 15 ಕೃಪಾಂಕವನ್ನು 15ಕ್ಕೆ ಇಳಿಸಿರುವುದು.

ಶ್ರೀ ವೈ.ಕೆ. ರಾಮಯ್ಯ (ಕುಣಿಗಲ್):- ಸನ್ಮಾನ್ಯ ಅಧ್ಯಕ್ಷರೇ, ನಾನು ಮತ್ತೆ ನನ್ನ ಸ್ನೇಹಿತರುಗಳು